SRI R. GUNDU RAO (Chief Minister).—

(a) Yes, about 221 acres of land has been acquired.

(b) One dependent son/daughter of the person whose land has been acquired by the HAL will be considered for employment for lower cadres in preference to outsiders without preference to employment exchange on compassionate grounds subject to condition that the candidates should have registered their names in the local employment exchange. The appointment of such persons will be subject to assessment of their suitability by the Selection Committee as in the case of other candidates.

(c) Reservations can be made only in respect of candidates belonging to SC/ST/BC/BCT etc., as well as the physically handicapped but not in respect of those whose lands have been acquired, as it would not be legally valid.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಈಗ ಕೇಂದ್ರಸರ್ಕಾರದ ಕಾರ್ಖಾನೆಗಳಲ್ಲಿ ನಮ್ಮ ರಾಜ್ಯದ ರೈತರೇನಾದರೂ ಆ ಕಾರ್ಖಾನೆಗಳಿಗಾಗಿ ತಮ್ಮ ಜಮೀನನ್ನು ಕಳೆದುಕೊಂಡಿದ್ದರೆ, ಅಂತಹವರ ಮಂಕ್ಕಳಿಗೆ ಕೆಲಸ ಕೊಡಲು ಸಹಾನುಭೂತಿಯಿಂದ ಒಪ್ಪಿಕೊಂಡಿದ್ದಾರೆ. ಅದೇ ಒಂದು ಪದ್ಧತಿಯನ್ನು ನಮ್ಮ ರಾಜ್ಯಸರ್ಕಾರದ ಮೂಲೀಕತ್ವದಲ್ಲಿರುವಂತಹ ಕೈಗಾರಿಕೆಗಳಿಗೂ ಸಹ ಅನ್ವಯ ಮಾಡಲು ಏನು ಕಷ್ಟವಿದೆ?

ಶ್ರೀ ಆರ್. ಗುಂಡೂರಾವ್.—ಇಲ್ಲಿ ಕಷ್ಟಸಂಖದ ಪ್ರಶ್ನೆ ಏನೂ ಇಲ್ಲ. ಆ ತರಹದ ಸಲಹೆ ಇದ್ದರೆ ನೋಡೋಣ.

ಶ್ರೀ ಬಿ.ವಿ.ರಾಮಚಂದ್ರ ರೆಡ್ಡಿ.—ಈಗ ಎನ್.ಜಿ.ಇ.ಎಫ್.ನಲ್ಲಿ ರೆಕ್ರೂಟ್‌ಮೆಂಟ್ ನಡೆಯುತ್ತಿದೆ. ಈ ಕಾರ್ಖಾನೆಗಾಗಿ ಯಾರು ಜಮೀನು ಕಳೆದುಕೊಂಡರೋ, ಅವರು ಆ ಜಮೀನಿಗಾಗಿ ಪಡೆದುಕೊಂಡ ಪಣವನ್ನು ಸಹ ಖರ್ಚು ಮಾಡಿಕೊಂಡು ಈಗ ನಿರ್ಗತಿಕರಾಗಿದ್ದಾರೆ. ಮತ್ತು ಇಂತಹವರ ಮಕ್ಕಳು ಕೆಲಸವಿಲ್ಲದೆ ಪೋಲಿಗಳಾಗುತ್ತಿದ್ದಾರೆ. ಆದಕಾರಣ ಎಚ್.ಎ.ಎಲ್.ನಲ್ಲಿ ಇರುವಂತಹ ರೀತಿಯಲ್ಲಿ ಇಲ್ಲಿಯೂ ಸಹ ಜಮೀನು ಕಳೆದುಕೊಂಡವರ ಮಕ್ಕಳಿಗೆ ಕೆಲಸ ಕೊಡಬೇಕೆಂದು ತಾವು ಸಲಹೆ ನೀಡಿದರೆ, ಈ ಬಡ ಕುಟುಂಬಗಳಿಗೆ ಸಹಾಯವಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಇದು ಒಳ್ಳೆಯ ಸಲಹೆ, ಯೋಚನೆ ಮಾಡಬಹುದು.

Government First Grade College, Hebri

76. SRI A. G. KODGI (Baindur).— Will the Minister for Education be pleased to state :

(a) whether a First Grade Government College has been opened in Hebri of Dakshina Kannada District ;

(b) if so, whether adequate staff and other equipments are provided there ?

SRI G. B. SHANKARA RAO (Minister for Education).—

(a) Yes.

(b) Yes.

ಶ್ರೀ ಎ. ಜಿ. ಕೊಡ್ಗಿ.—ದಕ್ಷಿಣ ಕನ್ನಡ ಜಿಲ್ಲೆಯ ಹೆಬ್ರಿಯಲ್ಲಿ ಪ್ರಥಮದರ್ಜೆ ಕಾಲೇಜು ಪ್ರಾರಂಭಿಸಿದ್ದು ಯಾವಾಗ, ಮತ್ತು ಆ ಕಾಲೇಜು ಸ್ಥಾಪನೆಗೆ ವಿಶ್ವವಿದ್ಯಾನಿಲಯದ ಮಂಜೂರಾತಿ ದೊರಕಿದೆಯೇ, ದೊರಕಿದ್ದರೆ ಯಾವಾಗ ದೊರಕಿತು ?

† ಶ್ರೀ ಜಿ. ಬಿ. ಶಂಕರರಾವ್.—ಈ ಕಾಲೇಜು ಹೋದವರ್ಷ ಅಂದರೆ ೩೦-೭-೧೯೮೦ರಲ್ಲಿ ಪ್ರಾರಂಭವಾಗಿದೆ. ಸರ್ಕಾರ ಆರ್ಡಿನೆನ್ಸ್ ಮುಖಾಂತರ ಕಾಲೇಜಿಗೆ ಮಂಜೂರಾತಿ ಕೊಡಬೇಕು ಎಂದು ಮಾಡಿದ್ದೇವೆ, ತಮಗೆ ಗೊತ್ತಿದೆಯೆಲ್ಲ.

ಶ್ರೀ ಎ. ಜಿ. ಕೊಡಗಿ.—ಯಾವ ಯಾವ ಸಬ್ಜೆಕ್ಟ್‌ಗಳನ್ನು ಪ್ರಾರಂಭಮಾಡಿದ್ದೀರಿ, ಮತ್ತು ಇದರಲ್ಲಿರುವಂಥ ಟೀಚಿಂಗ್ ಮತ್ತು ನಾನ್ ಟೀಚಿಂಗ್ ಸ್ಟಾಫ್ ಎಷ್ಟು ?

SRI G. B. SHANKARA RAO.—The subjects are, English Kannada, History, Hindi, Economics, Political Science and Commerce. The combinations are – History, Economics and Commerce, History, Economics and Political Science, and Commerce is a different subject. Regarding teaching and non-teaching staff the number is, for teaching staff–for English one part-time lecturer, one post for Kannada, one post for Hindi, one post for History, and one post for Political Science and for Commerce. I know the intention of the member. There is not sufficient number of students in the college. So, the part-time lecturers have been appointed depending upon the work-load. So far as non-teaching staff is concerned full quota is kept up.

ಶ್ರೀ ಎ. ಜಿ. ಕೊಡಗಿ.—ಮಾನ್ಯ ಮಂತ್ರಿಗಳು ಸ್ವಲ್ಪ ತಿದ್ದುಪಡಿ ಮಾಡಿದ್ದಾರೆ, ಸಂತೋಷ. ಉತ್ತರದಲ್ಲಿ ಸಾಕಷ್ಟು ಸಿಬ್ಬಂದಿ ಇದ್ದಾರೆ ಎಂದು ಹೇಳಿದ್ದಾರೆ. ಈಗ ಆದನ್ನು ಒಪ್ಪಿಕೊಂಡು ಸಾಕಷ್ಟು ಸಿಬ್ಬಂದಿ ಇಲ್ಲ, ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ನನಗೆ ಬಂದ ವರದಿ ಪ್ರಕಾರ ಸಂಪೂರ್ಣವಾಗಿ ಎಲ್ಲಾ ಸಬ್ಜೆಕ್ಟ್‌ಗಳಿಗೂ ಅಧ್ಯಾಪಕರು, ಲೆಕ್ಚರರ್ಸ್ ನೇಮಕವಾಗಿಲ್ಲ, ಪಾರ್ಟ್‌ಟೈಮಾಗಿ ನೇಮಕವಾಗಿಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು. We have made temporary arrangements because there is not enough workload. Therefore, we have made temporary arrangements by appointing part-time lecturers to teach the subjects. You cannot make appointments unless it is justified. Now we have made arrangements to see that students did not suffer. So far as appointment of lecturers are concerned we have requested the Public Service Commission to select candidates and recruit them and as soon as we receive the list of selected candidates we shall fill up these posts.

ಶ್ರೀ ಶೇರ್‌ಖಾನ್.—ತಾವು ಆರ್ಡಿನೆನ್ಸ್ ಇಷ್ಯೂಮಾಡಿ ಕಾಲೇಜು ಓಪನ್ ಮಾಡಿದ್ದೇವೆ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ಹಾಗಲ್ಲ, ಅಫಿಲಿಯೇಷನ್ ಒಂದರೆ ಆಟೊಮ್ಯಾಟಿಕ್ ಆಗಿ ಆಗುತ್ತದೆ.

ಶ್ರೀ ಶೇರ್‌ಖಾನ್.—ಮಾನ್ಯ ಮಂತ್ರಿಗಳು ಆರ್ಡಿನೆನ್ಸ್ ಇಷ್ಯೂ ಮಾಡಿದ್ದೇವೆ ಎಂದು ಹೇಳಿದರು. ಇದಕ್ಕೆ ಸ್ಪೆಷಲ್ಲಾಗಿ ಆರ್ಡಿನೆನ್ಸ್ ಇಷ್ಯೂ ಮಾಡಿ ಸ್ಟಾರ್ಟ್ ಮಾಡುವುದಕ್ಕೆ ಕಾರಣವೇನು ? ಇದೇರೀತಿ ಬೇರೆ ಬೇರೆ ಡಿಸ್ಟ್ರಿಕ್ಟ್‌ಗಳಲ್ಲಿ ಸ್ಕೂಲುಗಳನ್ನು ಓಪನ್ ಮಾಡಿದ್ದೀರಾ ?

ಶ್ರೀ ಜಿ. ಬಿ. ಶಂಕರರಾವ್.—ತಮ್ಮೆಂತಹವರು ಒತ್ತಡ ತಂದಾಗ ಡಿಪಾರ್ಟ್‌ಮೆಂಟ್‌ನವರು ಪರಿಶೀಲನೆಮಾಡಿದ್ದಾರೆ. ಆದುದರಿಂದ ಕಾಲೇಜು ಮಾಡಬೇಕಾಯಿತು. ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಮಾಹಿತಿ ತರಿಸಿ ಉತ್ತರ ಕೊಡುತ್ತೇನೆ.

ಶ್ರೀ ಶೇರ್‌ಖಾನ್.—ನಮಗೆ ಬೇರೆ ಪ್ರಶ್ನೆ ಕೇಳಿ ಎಂದು ಹೇಳಬೇಕಾಗಿಲ್ಲ. ಆರ್ಡಿನೆನ್ಸ್ ಇಷ್ಯೂ ಮಾಡಿದಂಥ ಶಾಲೆಗಳ ನೆನಪು ಇರುವಹಾಗಿಲ್ಲ ಅಂದರೆ ಏನು. ಇವ್ವರೆ ಪೂರಾ ರಿಕಾರ್ಡ್ ಇರಬೇಕು, ಇದು ಒಂದಕ್ಕೇ ಏಕೆ ಇರುತ್ತದೆ.

ಶ್ರೀ ಜಿ. ಬಿ. ಶಂಕರರಾವ್.—ನಿಖರವಾಗಿ ಇಂತಿಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ. ಇಂತಿಷ್ಟು ಹೆಸರು, ಊರು ಬೇಕು ಅಂದರೆ ಮತ್ತೊಂದು ಪ್ರಶ್ನೆ ಕೇಳಿದರೆ ಉತ್ತರ ತರಿಸುತ್ತೇನೆ ಎಂದು ಹೇಳಿದೆ.

ಶ್ರೀ ಶೇರ್‌ಖಾನ್.—ಮತ್ತೊಂದು ಪ್ರಶ್ನೆ ಕೇಳಿ ಎಂದು ನಮಗೆ ಹೇಳಬೇಕಾಗಿಲ್ಲ ಸಾಹೇಬರೇ. ಹೌಸ್‌ಗೆ ಕಂಪ್ಲೀಟಾಗಿ ಇನ್‌ಫರ್ಮೇಷನ್ ಕೊಡಬೇಕು. ಒಂದಕ್ಕೆ ಹೇಳಿ, ಇನ್ನೊಂದಕ್ಕೆ ಬೇರೆ ಪ್ರಶ್ನೆ ಕೇಳಿ ಅಂದರೆ ಹೇಗೆ. ಮೆಂಬರ್ಸ್‌ಗೆ ಸ್ಯಾಟೀಸ್‌ಫ್ಯಾಕ್ಷನ್ ಕೊಡಬೇಕು. ಮತ್ತೊಂದು ಪ್ರಶ್ನೆ ಕೇಳಬೇಕು ಎಂದು ನಮಗೆ ಹೇಳಬೇಕಾಗಿಲ್ಲ.

ಶ್ರೀ ಜಿ. ಬಿ. ಶಂಕರರಾವ್.—ಇದು ಹೆಬ್ರಿ ಕಾಲೇಜಿಗೆ ಮಾತ್ರ ಸಂಬಂಧಿಸಿದ್ದು.

ಶ್ರೀ ಬಿ. ವಿ. ಕಕ್ಕಿಲಾಯ.—ಈ ಕಾ ಜನ್ನು ಪ್ರಾರಂಭ ಮಾಡಿದಾಗ ಯೂನಿವರ್ಸಿಟಿ ಅಫಿಲಿಯೇಷನ್ ಪ್ರಶ್ನೆ ಆಗ ಬಂದಿರಲಿಲ್ಲ. ಇಷ್ಟು ಸ್ಟಾಫ್ ಇರಬೇಕು, ವಿದ್ಯಾರ್ಥಿಗಳ ಪ್ರವೇಶ ಇಷ್ಟಿರಬೇಕು, ಕಟ್ಟಡ ಹೀಗೆ ಇರಬೇಕು ಎಂಬು ಯು.ಜಿ.ಸಿ. ಮತ್ತು ವಿಶ್ವವಿದ್ಯಾನಿಲಯದ ನಿಯಮಗಳಿವೆ. ಅದಕ್ಕನುಗುಣವಾಗಿ ಆ ಶಾಲೆ ನಡೆಯುತ್ತಾ ಇದ್ದರೆ ಅದಕ್ಕೆ ಅಫಿಲಿಯೇಷನ್ ಕೊಡಬೇಕು ಎಂದು ಇಷ್ಟರತನಕ ಇದ್ದಿತು. ಆರ್ಡಿನೆನ್ಸ್ ಮೂಲಕ ತಾವು ಮಂಜೂರಾತಿ ಕೊಟ್ಟಿರಿ. ಯೂನಿವರ್ಸಿಟಿ ಅನುಮತಿ ಕೊಡಲಿ, ಕೊಡದೇ ಹೋಗಲಿ ಅದು ನಡೆಯುತ್ತದೆ. ತಾವು ಅನುಮತಿ ಕೊಟ್ಟಿದ್ದೀರಿ, ಶಾಲೆ ನಡೆಯುತ್ತದೆ. ಯೂನಿವರ್ಸಿಟಿ ಅಫಿಲಿಯೇಷನ್ ಇದೆಯೋ ಇಲ್ಲವೋ. ಆರ್ಡಿನೆನ್ಸ್ ಇರುವುದರಿಂದ ಕಾಲೇಜು ನಡೆಯುವುದಕ್ಕೆ ಇರತಕ್ಕ ಅರ್ಹತೆ ಬಗ್ಗೆ ಏನು ನಿಯಮಗಳಿವೆ, ಆ ಎಲ್ಲಾ ನಿಯಮಗಳ ಪ್ರಕಾರ, ಕಾಲೇಜು ನಡೆದುಕೊಂಡು ಹೋಗುವುದಕ್ಕೆ ಬೇಕಾದ ಅರ್ಹತೆ ಇದೆಯೇ ? ಇದರ ಬಗ್ಗೆ ನಮಗೆ ಮಾಹಿತಿ ಕೊಟ್ಟರೆ ಒಳ್ಳೆಯದು.

ಶ್ರೀ ಜಿ. ಬಿ. ಶಂಕರರಾವ್.—ಯೂನಿವರ್ಸಿಟಿಯವರು ಅಫಿಲಿಯೇಷನ್ ಕಳುಹಿಸುವಾಗ ಸ್ಥಳೀಯವಾಗಿ ಕೇಳುತ್ತಾರೆ. ಕೇಳಿ ವಿಚಾರಮಾಡಿ ವಿಶ್ವವಿದ್ಯಾನಿಲಯದ ಶಿಫಾರಸಿನಿಂದ ಕಳಿಸಿಕೊಡುತ್ತಾರೆ. ಆದೇ ರೀತಿ ಡಿಪಾರ್ಟ್‌ಮೆಂಟ್‌ನಿಂದ ಪರಿಶೀಲನೆಮಾಡಿಸಿ ಮಾಡಿದ್ದೇವೆ. ಆದ್ದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು.—ಸ್ಯಾಂಕ್ಷನ್ ಮಾಡುವುದಕ್ಕೆ ಮುಂಚೆ Set norms ಇದೆಯೇ.

Sri B. V, Kakkilaya.—My question is, are you satisfied that that all the conditions for affiliation which normally the University would expect are fulfilled ? Whether this particular college which now gets automatic affiliation in view of the ordinance issued has fulfilled the conditions. On the basis of ordinance you have given sanction to this college. I would like to know, while according sanction have the Government examined whether this college has fulfilled the conditions prescribed under the Universities Act ?

ಶ್ರೀ ಜಿ. ಬಿ. ಶಂಕರರಾವ್.—ಅವರು ವಿದ್ಯಾರ್ಥಿಗಳ ಸಂಖ್ಯೆ ವಿಚಾರದಲ್ಲಿ ಕೇಳುತಿದ್ದಾರೆ. ಕಾಲೇಜು ಬಹಳ ತಡವಾಗಿ ಪ್ರಾರಂಭವಾಯಿತು. ತಾರೀಖು ೩೦-೩-೧೯೮೦ರಲ್ಲಿ ಪ್ರಾರಂಭವಾದುದರಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ. ೪೮ ವಿದ್ಯಾರ್ಥಿಗಳಿದ್ದಾರೆ. ಹಿಸ್ಟರಿ ಪೊಲಿಟಿಕಲ್ ಸೈನ್ ಕಾಂಬಿನೇಷನ್‌ಗೆ ೨೫ ವಿದ್ಯಾರ್ಥಿಗಳಿದ್ದಾರೆ, ಬಿ.ಕಾಂಗೆ ೨೩ ವಿದ್ಯಾರ್ಥಿಗಳಿದ್ದಾರೆ. ಇದು ಸರ್ಕಾರಿ ಕಾಲೇಜು ಆದುದರಿಂದ ಕಂಡೀಷನ್ಸ್, ಕರಾರುಗಳನ್ನು ಪೂರೈಸುವುದು ಸರ್ಕಾರದ ಜವಾಬ್ದಾರಿ ಇದೆ, ಆದನ್ನು ಪೂರೈಸುತ್ತೇವೆ.